**<u>ದಿನಾಂಕ 10.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎ.ಎನ್.ಟಿ. ಪ್ರತಿವಾದಿಯ ಪರ ವಕೀಲರಿಂದಃ-</u>**

ನನ್ನ ಗಂಡ ಬದುಕಿದ್ದಾಗ ದಾವಾ ಆಸ್ತಿಗಳಲ್ಲಿ ವಿಭಾಗ ಕೇಳಿ ಪ್ರಕರಣ ದಾಖಲಿಸಿರಲಿಲ್ಲ ಎಂದರೆ ಸರಿ. ನನ್ನ ಗಂಡನ ಸಹೋದರರ ನಡುವೆ ಮೊದಲು ಆಗಿದ್ದ ವಿಭಾಗ ಸರಿಯಾಗಿತ್ತು. ನನ್ನ ಗಂಡ ಬದುಕಿದ್ದಾಗ ದಾವಾ ಆಸ್ತಿಯ ಕುರಿತು ಅವರು ನನಗಾಗಲೀ ಅಥವಾ ನನ್ನ ಮಕ್ಕಳಿಗಾಗಲೀ ಮರಣ ಶಾಸನ ಬರೆದಿಲ್ಲ. ನಾನು ಇತ್ತೀಚೆಗೆ ಹಾಜರು ಪಡಿಸಿರುವ ದಾಖಲೆಗಳು ನನ್ನ ಮತ್ತು ನನ್ನ ಗಂಡನ ನಡುವೆ ಜೀವನಾಂಶಕ್ಕಾಗಿ ದಾಖಲಾಗಿದ್ದ ಪ್ರಕರಣದ ಕುರಿತು ದಾಖಲೆಗಳು ಎಂದರೆ ಸರಿ. ಆ ಪ್ರಕರಣದಲ್ಲಿ ಈ ದಾವಾದ ಆಸ್ತಿಯ ಕುರಿತು ಪ್ರಸ್ತಾಪ ಬಂದಿಲ್ಲ ಎಂದರೆ ಆ ಆಸ್ತಿಯ ಸ್ವಾಧೀನದಲ್ಲಿ ನಾವೇ ಇದ್ದೇವೆ. ಆ ಪ್ರಕರಣದ ದಾಖಲೆಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್.)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**